ಅರಣ್ಯ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ

2029 (2359); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ರಾಜ್ಯ ಅರಣ್ಯ ಇಲಾಖೆಯಲ್ಲಿರುವ ವಿವಿಧ ವಲಯಗಳ ಸಂಖ್ಯೆ ಎಷ್ಟು; ಈ ವಲಯಗಳಿಗೆ ಈ ವಲಯಗಳಿಗೆ ಮಂಜೂರಾಗಿರುವ ಎ, ಬಿ, ಸಿ, ಮತ್ತು 'ಡಿ' ವರ್ಗದ ಅಧಿಕಾರಿಗಳು, ನೌಕರರುಗಳ ಸಂಖ್ಯೆ ಎಷ್ಟು; ಹಾಲಿ ಭರ್ತಿ ಇರುವ ಮತ್ತು ಖಾಲಿ ಇರುವ ಮತ್ತು ಅಧಿಕಾರಿಗಳು ಮತ್ತು ನೌಕರರ ಸಂಖ್ಯೆ ಎಷ್ಟು; ನಿಯೋಜನೆ ಮೇರೆಗೆ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎಫ್.ಎಸ್. ಮತ್ತು ರಾಜ್ಯ ಅರಣ್ಯ ಅಧಿಕಾರಿಗಳ ಸಂಖ್ಯೆ ಎಷ್ಟು, ಗುತ್ತಿಗೆ ಆಧಾರ, ದಿನಗೂಲಿ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಸಿ ಹಾಗೂ ಕಡಿಮೆ ಶ್ರೇಣಿಯ ನೌಕರರ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಆ) ಅರಣ್ಯವನ್ನು ರಕ್ಷಣಾ ಕಾರ್ಯದಲ್ಲಿ ನೇರವಾಗಿ ತೊಡಗಿಕೊಳ್ಳುವ ಬಿ ಮತ್ತು ಸಿ ವರ್ಗದ ನೌಕರರ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ನೇಮಕಾತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ರಾಜ್ಯದಲ್ಲಿರುವ ಅರಣ್ಯದ ವಿಸ್ತೀರ್ಣ 1980,1990,2000 ಮತ್ತು 2010 ರಲ್ಲಿ ಎಷ್ಟು ರಾಷ್ಟ್ರೀಯ ಸರಾಸರಿಗಿಂತ ಅರಣ್ಯ ಪ್ರದೇಶದ ವ್ಯಾಪ್ತಿ ರಾಜ್ಯದಲ್ಲಿ ಕಡಿಮೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ರಾಜ್ಯ ಅರಣ್ಯ ಇಲಾಖೆಯಲ್ಲಿ ಪ್ರಾದೇಶಿಕ, ಸಾಮಾಜಿಕ ಅರಣ್ಯ ವನ್ಯಜೀವಿ, ಕಾರ್ಯಯೋಜನೆ, ಸಂಶೋಧನೆ ಹಾಗೂ ಇತರೆ ವಿಶೇಷ ಸಂಖ್ಯೆಗಳಲ್ಲಿ ಒಟ್ಟು 765 ವಲಯ ಅರಣ್ಯಾಧಿಕಾರಿಯವರ ಹುದ್ದೆಗಳಿರುತ್ತವೆ.

ಕ್ರ. ಸಂ.	ವರ್ಗ	ಮಂಜೂರು	ಭರ್ತಿ	ಖಾಲಿ
1	ಎ	532	502	30
2	ಬಿ	848	701	147
3	ಸಿ	9058	7016	2041
4	ಡಿ	1061	777	284

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಮತ್ತು ಅರಣ್ಯ ಇಲಾಖೆ ಅವಲಂಬಿತ ನಿಗಮ/ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳನ್ನು ಹೊರತುಪಡಿಸಿ ವಿವಿಧ ಇಲಾಖೆಗಳಲ್ಲಿ ನಿಯೋಜನೆ ಮೇರೆಗೆ ಅಧಿಕಾರಿಗಳ/ನೌಕರರು ಸೇವೆ ಸಲ್ಲಿಸುತ್ತಿರುವ ವಿವರ ಈ ಕೆಳಗಿನಂತೆ ನಮೂದಿಸಿದೆ.

ಕ್ರ. ಸಂ	ವೃಂದ	ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ
1	ಭಾರತೀಯ ಅರಣ್ಯ ಸೇವೆ	36
2	ಉಪ ಅರಣ್ಯ ಸಂರಕ್ಷಣಾಧಿಕಾರಿ (ರಾಜ್ಯ ಅರಣ್ಯ ಸೇವೆ)	12
3	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ರಾಜ್ಯ ಅರಣ್ಯ ಸೇವೆ)	48

ಆ) ಹೌದು ಅರಣ್ಯ ರಕ್ಷಣಾ ಕಾರ್ಯದಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಕಂಡುಬಂದಿರುತ್ತದೆ. ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯ ಹಂತಗಳು ಈ ಕೆಳಕಂಡಂತಿದೆ:–

1) 113 ಉಪ ವಲಯ ಅರಣ್ಯಾಧಿಕಾರ, 329 ಅರಣ್ಯ ರಕ್ಷಕ, ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ನೇರ ನೇಮಕಾತಿ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ

2) 110 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ದಿನಾಂಕ 29–10–2014 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಪೂರ್ವಭಾವಿ ಲಿಖಿತ ಪರೀಕ್ಷೆಗಳನ್ನು ದಿನಾಂಕ 15–2–2015 ರಂದು ನಡೆಸಲಾಗಿದೆ. ಅಭ್ಯರ್ಥಿಗಳು ಪಡೆದ ಅಂಕಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಈ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನೂ ಸುಮಾರು 3 ತಿಂಗಳ ಕಾಲಾವಕಾಶ ಬೇಕಾಗುವುದು.

3) 231 ಅರಣ್ಯ ವೀಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ದಿನಾಂಕ 18–3–2013 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಹೈದರಾಬಾದ್–ಕರ್ನಾಟಕ ಪ್ರದೇಶದ ಮೀಸಲಾತಿ ಪ್ರಕ್ರಿಯೆಯು ಮುಗಿದ ಕೂಡಲೇ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಏಪ್ರಿಲ್ 2015 ರ ಮಾಹೆಯಲ್ಲಿ ಲಿಖಿತ ಪರೀಕ್ಷೆಯನ್ನು ಏರ್ಪಡಿಸಲು ಅಂದಾಜಿಸಲಾಗಿದೆ.

4) ಸರ್ಕಾರದ ಪತ್ರ ಸಂಖ್ಯೆ: ಅಪಜೀ 005. ಅಅಸೇ 2014 ದಿನಾಂಕ 07–07–2014ರ ಪತ್ರದಲ್ಲಿ ಒಟ್ಟು 60 ವಲಯ ಅರಣ್ಯಾಧಿಕಾರಿ, 474 ಉಪ ವಲಯ ಅರಣ್ಯಾಧಿಕಾರಿ, 584 ಅರಣ್ಯ ರಕ್ಷಕ, ಹುದ್ದೆಗಳನ್ನು ಹಂತ ಹಂತವಾಗಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಆದಷ್ಟು ಶೀಘ್ರದಲ್ಲೇ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

ಇ) ರಾಷ್ಟ್ರೀಯ ಅರಣ್ಯ ನೀತಿ 1988ರ ಪ್ರಕಾರ ದೇಶದ ಭೌಗೋಳಿಕ ಪ್ರದೇಶದ ಶೇಕಡ 33% ರಷ್ಟು ಪ್ರದೇಶವು ಹಸಿರಿನಿಂದ (ಅರಣ್ಯದಿಂದ) ಕೂಡಿರಬೇಕೆಂದು ಪ್ರಸ್ತಾಪಿಸಲ್ಪಟ್ಟಿರುತ್ತದೆ. ರಾಜ್ಯದಲ್ಲಿರುವ ಅರಣ್ಯದ ವಿಸ್ತೀರ್ಣ ಈ ಕೆಳಗಿನಂತಿದೆ.

Year	Geographical area of State	Forest land	Changes in forest land	Percentage
1980-81	1,91,791	37,865.98	-	19.75%
1990-91	1,91,791	38,723.56	(+)857.58	20.29%
2000-01	1,91,791	38,284.30	(-)437.26	19.96%
2010-11	1,91,791	43,356.45	(+)5,072.15	22.61%

(Area in Sq. K.M.)